ಕಂದಾಯ ಖರಾಬ್ ಜಮೀನು ಮಂಜುರಾತಿ

1601 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಭೂ ಮಂಜೂರಾತಿ ಸಮಿತಿಯಲ್ಲಿ (ಅಕ್ರಮ ಸಾಗುವಳಿ ಸಕ್ರಮ) ಯಾವ ಜಮೀನನ್ನು ಮಂಜೂರು ಮಾಡಬಹುದು?*

ಆ) *ರೆವಿನ್ಯೂ ಖರಾಬ್ ಜಮೀನನ್ನು ಮಂಜೂರು ಮಾಡದಿರುವ ಬಗ್ಗೆ ಸರ್ಕಾರವು ಆದೇಶ ಹೊರಡಿಸಿದೆಯೇ? (ಆದೇಶ ಪ್ರತಿ ಒದಗಿಸುವುದು)*

ಇ) *ರೆವಿನ್ಯೂ ಖರಾಬ್ ಜಮೀನನ್ನು ಮಂಜೂರು ಮಾಡದಿರಲು ಕಾರಣವೇನು? ಈಗಾಗಲೇ ರೈತರು ಉಳುಮೆ ಮಾಡುತ್ತಿರುವ ಕರಾಬ್ ಜಮೀನನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರ ಆದೇಶ ಹೊರಡಿಸುವುದೇ? ಹಾಗಿದ್ದಲ್ಲಿ ಯಾವಾಗ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ಅರಣ್ಯ ಜಮೀನುಗಳಲ್ಲಿ, ಪ್ಲಾಂಟೇಷನ್ ಬೆಳೆಗಾಗಿ ಮಾಡುತ್ತಿರುವ ಜಮೀನುಗಳಲ್ಲಿ, ಸಾರ್ವಜನಿಕ ಉದ್ದೇಶಗಳಿಗೆ ಕಾಯ್ದಿರಿಸಿರುವ ಜಮೀನುಗಳು ಅಂದರೆ ಗುಂಡುತೋಪು, ಕೆರೆ ಅಂಗಳ, ಸೇಂದಿವನ, ಹಳ್ಳ ಖರಾಬ್, ಹುಟ್ ಖರಾಬ್, ಸ್ಮಶಾನಗಳಲ್ಲಿ ಮಾಡುತ್ತಿರುವ ಸಾಗುವಳಿಗಳನ್ನು ಹಾಗೂ ವಿಶೇಷದಕ್ಕುಳ್ಳ ಜಮೀನುಗಳು ಅಂದರೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 79(2) ರಲ್ಲಿ ನಮೂದಿಸಲಾದ ಜಮೀನುಗಳಲ್ಲಿ ಅನಧಿಕೃತ ಸಾಗುವಳಿಗಳನ್ನು ಹೊರತುಪಡಿಸಿ ಇತರೆ ಬೆಳೆಗಳಿಗಾಗಿ ಮಾಡುತ್ತಿರುವ ಅನಧಿಕೃತ ಸಾಗುವಳಿಗಳನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯಕಾಯ್ದ 1964ರ ಕಲಂ 94ಎ ಗೆ ತಿದ್ದುಪಡಿ ಹಾಗೂ ಅದಕ್ಕೆ ಮಾಡಲಾದ ನಿಯಮಗಳನ್ವಯ ಸಕ್ರಮಗೊಳಿಸಲು ಅವಕಾಶ ಕಲ್ಪಿಸಲಾಗಿದೆ.

ಆ) ರೆವಿನ್ಯೂ ಖರಾಬ್ ಜಮೀನನ್ನು ಸಕ್ರಮಗೊಳಿಸಲು ಮೇಲೆ (ಅ) ರಲ್ಲಿ ತಿಳಿಸಿದಂತೆ ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಭೂಸಾರ ಸಂರಕ್ಷಣೆ ಯೋಜನೆಯಲ್ಲಿ ಅವ್ಯವಹಾರ.

1602 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಭೂಸಾರ ಸಂರಕ್ಷಣೆ ಯೋಜನೆಯಲ್ಲಿ ಎಷ್ಟು ಮೊತ್ತದ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಅವ್ಯವಹಾರದ ಮೊತ್ತವೆಷ್ಟು?

2) ಇದಕ್ಕೆ ಕಾರಣರಾದವರು ಯಾರು?